ಅಮೆರಿಕ-ಭಾರತ ಒಪ್ಪಂದಕ್ಕೆ ಕೃಷಿ ತಡೆಗೋಡೆಯಾಗಿದ್ದೇಕೆ?

ಕೃಷಿ ಉತ್ಪನ್ನಗಳ ಆಮದು ಸೂಕ್ಷ್ಮ ವಿಷಯ

ಅಮೆರಿಕ ಮತ್ತು ಭಾರತದ ಮಧ್ಯೆ ಕಳೆದ ಎರಡು ತಿಂಗಳಿಂದ ನಡೆಯುತ್ತಿರುವ ವ್ಯಾಪಾರ ಮಾತುಕತೆ ಅಂತಿಮ ಹಂತಕ್ಕೆ ಬಂದಿದ್ದರೂ ಅಂತಿಮಗೊಂಡಿಲ್ಲ. ಜುಲೈ 9ರ ಗಡುವಿಗೆ ಇನ್ನು ಎರಡೇ ದಿನ ಬಾಕಿ ಇದೆ. ಉಳಿದೆಲ್ಲ ವಲಯಗಳ ವಿಷಯದಲ್ಲಿ ಮಾತುಕತೆ ಫಲಪ್ರದವಾಗಿದ್ದರೂ ಕೃಷಿ ವಿಷಯ ತಡೆಗೋಡೆಯಾಗಿ ಪರಿಣಮಿಸಿದೆ. ಇದೊಂದು ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಎರಡೂ ದೇಶಗಳು ಸಿದ್ಧವಿಲ್ಲ. ಏನಿದು ಸಮಸ್ಯೆ, ಏಕೆ ಹೀಗಾಗಿದೆ ಎಂಬುದರ ವಿವರ ಇಲ್ಲಿದೆ.

ಅಲ್ಲೇ ಬೇರೆ, ಇಲ್ಲೇ ಬೇರೆ...

ಭಾರತದಲ್ಲಿ ಒಬ್ಬ ರೈತನ ಸರಾಸರಿ ಕೃಷಿ ಭೂಮಿ ಕೇವಲ 1.08 ಹೆಕ್ಟೇರ್ ಅಷ್ಟೇ. ಅಮೆರಿಕದಲ್ಲಿ ಇದು 187 ಹೆಕ್ಟೇರ್. ಹೈನುಗಾರಿಕೆಯಲ್ಲಿಯೂ ಅಷ್ಟೇ. ಭಾರತದಲ್ಲಿ ಒಬ್ಬ ರೈತನ ಬಳಿ ಸರಾಸರಿ 2-3 ಜಾನುವಾರುಗಳಿದ್ದರೆ ಅಮೆರಿಕದ ರೈತನ ಬಳಿ ಸರಾಸರಿ ನೂರಾರು ಜಾನುವಾರುಗಳಿರುತ್ತವೆ. ಹೀಗಾಗಿ ಭಾರತದ ಸಣ್ಣ ರೈತರು ಅಮೆರಿಕದ ರೈತರೊಂದಿಗೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ. ಭಾರತದಲ್ಲಿ ಕೃಷಿ ಬಹುತೇಕ ಯಾಂತ್ರೀಕರಣವಾಗದೆ ಉಳಿದಿದೆ. ಏಕೆಂದರೆ ಸಣ್ಣ ಭೂ ಹಿಡುವಳಿಯಲ್ಲಿ ದೊಡ್ಡ ಯಂತ್ರಗಳಿಗೆ ಅವಕಾಶ ಇರುವುದಿಲ್ಲ. ಅನೇಕ ಪ್ರದೇಶಗಳಲ್ಲಿ ರೈತರು ತಮ್ಮ ತಾತ ಮುತ್ತಾತ ತೋರಿಸಿಕೊಟ್ಟ ಕೃಷಿ ಪದ್ಧತಿಗಳನ್ನು ಈಗಲೂ ಅನುಸರಿಸುತ್ತಿದ್ದಾರೆ. ಆದರೆ ಅಮೆರಿಕದಲ್ಲಿ ಕೃಷಿಕ್ಷೇತ್ರದಲ್ಲಿ ಅತ್ಯಾಧುನಿಕ ಉಪಕರಣಗಳು ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನಗಳು ವ್ಯಾಪಕವಾಗಿವೆ. ಅದರಿಂದ ಉತ್ಪಾದಕತೆ ಹೆಚ್ಚಿದೆ.

ಭಾರತದ 3.9 ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಕೊಡುಗೆ ಶೇ. 16ರಷ್ಟು ಮಾತ್ರ. ಆದರೂ ದೇಶದ 140 ಕೋಟಿ ಜನಸಂಖ್ಯೆಯ ಸುಮಾರು ಅರ್ಧದಷ್ಟು ಜನರಿಗೆ ಕೃಷಿಯೇ ಜೀವನಾಧಾರ. ರೈತ ಸಮುದಾಯ ಭಾರತದಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಶಕ್ತಿಶಾಲಿ. ನಾಲ್ಕು ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಕೃಷಿ ಕಾನೂನುಗಳನ್ನು ಜಾರಿಗೊಳಿಸಲು ಯತ್ನಿಸಿದಾಗ, ರೈತರ ತೀವ್ರ ಪ್ರತಿಭಟನೆಯಿಂದಾಗಿ ಅವುಗಳನ್ನು ಹಿಂತೆಗೆದುಕೊಳ್ಳಬೇಕಾಯಿತು. ಈಗ ಅಮೆರಿಕ ಪ್ರಸ್ತಾಪಿಸುತ್ತಿರುವ ಕಡಿಮೆ ಬೆಲೆಯ ಕೃಷಿ ಉತ್ಪನ್ನಗಳ ಆಮದಿನಿಂದ ಭಾರತದಲ್ಲಿ ಸ್ಥಳೀಯ ಕೃಷಿ ಉತ್ಪನ್ನಗಳ ಬೆಲೆ ಕುಸಿತವಾಗುವ ಭೀತಿ ಇದೆ. ಸರ್ಕಾರವನ್ನು ಟೀಕಿಸಲು ವಿರೋಧ ಪಕ್ಷಗಳಿಗೆ ಹೊಸ ವಿಷಯ ಸಿಕ್ಕಂತಾಗುತ್ತದೆ. ಇದೇ ಕಾರಣಕ್ಕೆ ಈವರೆಗಿನ ಯಾವ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿಯೂ ಭಾರತ ಕೃಷಿಯ ವಿಷಯದಲ್ಲಿ ರಾಜಿಯಾಗಿಲ್ಲ. ಅಮೆರಿಕದ ಉತ್ಪನ್ನಗಳಿಗೆ ಈಗ ಪ್ರವೇಶ ನೀಡಿದರೆ, ಬೇರೆ ದೇಶಗಳಿಗೂ ಇದೇ ರೀತಿಯ ರಿಯಾಯಿತಿಗಳನ್ನು ವಿಸ್ತರಿಸಬೇಕಾಗಬಹುದು.



ಅಮೆರಿಕದ ಒತ್ತಾಯ ಏನು?

ಭಾರತದ ಮಾರುಕಟ್ಟೆಯನ್ನು ತನ್ನ ವಿವಿಧ ಉತ್ಪನ್ನಗಳಿಗೆ ಮುಕ್ತಗೊಳಿಸುವಂತೆ ಅಮೆರಿಕ ಒತ್ತಾಯಿಸುತ್ತಿದೆ, ಇದರಲ್ಲಿ ಹೈನುಗಾರಿಕೆ, ಕೋಳಿಸಾಕಣೆಯೂ ಸೇರಿವೆ. ಮೆಕ್ಕೆಜೋಳ, ಸೋಯಾಬೀನ್, ಭತ್ತ, ಗೋಧಿ, ಎಥನಾಲ್, ಸಿಟ್ರಸ್ ಹಣ್ಣುಗಳು, ಬಾದಾಮಿ, ಸೇಬು, ದ್ರಾಕ್ಷಿ, ಆಲೂಗಡ್ಡೆ, ಚಾಕೊಲೇಟ್, ಕುಕೀಸ್ ಮತ್ತು ಫ್ರೋಜನ್ ಫ್ರೆಂಚ್ ಫ್ರೈಸ್ ಕೂಡ ಸೇರಿವೆ. ಭಾರತ ಅಮೆರಿಕದ ಡ್ರೈಫ್ರೂಟ್ಸ್ ಮತ್ತು ಸೇಬುಗಳಿಗೆ ಮುಕ್ತ ಪ್ರವೇಶ ನೀಡಲು ಒಪ್ಪಿದೆಯಾದರೂ, ಮೆಕ್ಕೆಜೋಳ, ಸೋಯಾಬೀನ್, ಗೋಧಿ ಮತ್ತು ಹೈನು ಉತ್ಪನ್ನಗಳ ಆಮದಿಗೆ ವಿರೋಧಿಸುತ್ತಿದೆ. ಭಾರತ ಯಾವತ್ತೂ ಕುಲಾಂತರಿ ಆಹಾರ ಬೆಳೆಗಳಿಗೆ ಅನುಮತಿ ನೀಡುವುದಿಲ್ಲ. ಆದರೆ ಅಮೆರಿಕದ ಮೆಕ್ಕೆಜೋಳ ಮತ್ತು ಸೋಯಾಬೀನ್ ಉತ್ಪಾದನೆಯ ಬಹುಪಾಲು ಕುಲಾಂತರಿ ಆಧಾರಿತವಾಗಿದೆ. ಹೈನುಗಾರಿಕೆಯೂ ಭಾರತದಲ್ಲಿ ಸೂಕ್ಷ್ಮ ವಿಷಯ. ಏಕೆಂದರೆ ಸಾಂಸ್ಕೃತಿಕ ವಿರೋಧಾಭಾಸಗಳಿಗೆ ಎಡೆಮಾಡಿಕೊಡುತ್ತದೆ. ಅಮೆರಿಕದಲ್ಲಿ ಹಸುಗಳಿಗೆ ಆಗಾಗ ಪ್ರಾಣಿ ಜನ್ಯ ಉಪಉತ್ಪನ್ನಗಳನ್ನು ಆಹಾರವಾಗಿ ನೀಡಲಾಗುತ್ತದೆ. ಇದು ಭಾರತದ ಆಹಾರ ಪದ್ಧತಿಗೆ ವಿರುದ್ಧವಾಗಿದೆ.

Vijayavani pg 02

Vijayavani pg 04

ಬಾಣಲೆಯಿಂದ ಬೆಂಕಿಗೆ ಬಿದ್ದ ಮಾವು ಬೆಳೆಗಾರರು!

■ ಎ. ಅಪ್ಪಾಜಿಗೌಡ ಮುಳಬಾಗಿಲು

ವಾಣಿಜ್ಯ ಬೆಳೆಯಾದ ಮಾವು ಫಸಲು ಉತ್ತಮವಾಗಿ ಬಂದಿ ದ್ದರೂ, ಬೆಳೆಗೆ ತಕ್ಕಂತೆ ಬೆಲೆ ಸಿಗದೆ ತೋಟದಲ್ಲೇ ಹಣ್ಣಾಗಿ ಕೊಳೆಯುವಂತಾಗಿದೆ. ಬೆಂಬಲ ಬೆಲೆಗೆ ಒತ್ತಾಯಿಸಿ ಹಲವು ಹೋರಾಟಗಳ ನಂತರ ಎಚ್ಚೆತ್ತ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನಕ್ಕೆ ತಂದಿತ್ತು. ಈಗ ಎಪಿಎಂಸಿ ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಕ ಖರೀದಿಗೆ ಮುಂದಾಗಿದೆ. ಇಲ್ಲಿ ಅಳವಡಿಸಿರುವ ನಿಯಮಗಳೇ ಬೆಳೆಗಾರನಿಗೆ ಇಕ್ಕಟ್ಟು ಸೃಷ್ಟಿಸಿವೆ.

ಸಂದಿಗ್ಧ ನಿಯಮಗಳಿಂದ ಮಾವು ಬೆಳೆಗಾರರಿಗೆ ನಷ್ಟ

ಕೇಂದ್ರ ಸರ್ಕಾರ ಮಾವು ಬೆಳೆಗಾರರಿಗೆ ಬೆಂಬಲ ಬೆಲೆ ನೀಡಲು ಮಾವು ಅಭಿವೃದ್ಧಿ ಮಂಡಳಿಗೆ 101 ಕೋಟಿ ರೂ. ಬಿಡುಗಡೆ ಮಾಡಿ, ತದನಂತರ ಶೇ.50 ಮೊತ್ತವನ್ನು ಕೇಂದ್ರ ಸರ್ಕಾರದಿಂದ ಮರುಪಾವತಿ ಪಡೆಯಲು ಷರತ್ತುಗಳನ್ನು ವಿಧಿಸಿದೆ. ಇದನ್ನು ಪೂರೈಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ರೈತರಿದ್ದು, ಪಹಣಿಯಲ್ಲಿ ರೈತನ ಹೆಸರು, ಜತೆಗೆ ಮಾವಿನ ಬೆಳೆ ಒಂದೇ ದಾಖಲಾಗಿರಬೇಕು. ಪಹಣಿಯಲ್ಲಿ ಮಾವು ಜತೆಗೆ ತೊಗರಿ, ಅಲಸಂದೆ, ಅವರೆ ಮತ್ತಿತರ ಮಿಶ್ರ ಬೆಳೆಗಳು ದಾಖಲಾಗಿದ್ದರೆ, ಖರೀದಿ ನೋಂದಣಿ ಅಧಿಕಾರಿಗಳು ಬೆಂಬಲ ಬೆಲೆ ನೀಡಲು ನಿರಾಕರಿಸುತ್ತಿರುವುದು ಸಮಸ್ಯೆಗೆ ಮೂಲ. ಕಂದಾಯ ಇಲಾಖೆ ಕಾಲಕಾಲಕ್ಕೆ ಬೆಳೆ ದಾಖಲಿಸುತ್ತಿರುವುದು, ರೈತರು ಸಹ ಪಹಣಿ ನೋಡಿಕೊಳ್ಳದಿರುವುದು ಇಂತಹ ಸಮಯದಲ್ಲಿ ಅಡಕತ್ತರಿಗೆ ಸಿಕ್ಕಿಸುತ್ತಿದೆ.



ಮುಳಬಾಗಿಲು ಹೊರವಲಯದಲ್ಲಿರುವ ಮಾವಿನ ಫಸಲು.

ಯೋಜನೆಯಡಿ ಪ್ರತಿ ಎಕರೆಗೆ 20 ಕ್ವಿಂಟಾಲ್‌ನಂತೆ ಒಬ್ಬ ರೈತನಿಂದ ಗರಿಷ್ಠ 5 ಎಕರೆಗೆ 100 ಕ್ವಿಂಟಾಲ್ ಖರೀದಿಗೆ ಮಿತಿಗೊಳಿಸಿರುವುದು, ಒಂದು ಟನ್‌ಗೆ ಎಂಐಪಿ ದರ 1,616 ರೂ. ನಿಗದಿ ಮಾಡಿದ್ದು, ಇದರಲ್ಲಿ ಶೇ. 25 ಪ್ರವೇಶ ದರದಂತೆ ಅಂದರೆ ಕೆ.ಜಿ.ಗೆ ಕೇವಲ 4 ರೂ. ನಂತೆ ಖರೀದಿ ಬೆಲೆ ನಿಗದಿಪಡಿಸಲಾಗಿದೆ. ಇದು ಮಾವು ಕೀಳುವ ಕೂಲಿಗೂ ಸಾಕಾಗುವುದಿಲ್ಲ ಎನ್ನಲಾಗುತ್ತಿದೆ. ಮಾವು ಕೀಳಲು ಒಬ್ಬ ಕೂಲಿಯಾಳಿಗೆ ದಿನಕ್ಕೆ 700 ರೂ. ನೀಡಬೇಕು. ಸರ್ಕಾರ ಕೊಡುವ ಪರಿಹಾರಕ್ಕಿಂತ ರೈತನಿಗೇ ಹೆಚ್ಚು ಖರ್ಚು ತಗಲುತ್ತದೆ. ಇದೆಲ್ಲ ಪಡಿಪಾಟಲು ಬದಲು ಬೆಳೆ ಗಿಡದಲ್ಲೇ ಬಿಡಲಾಗುತ್ತಿದೆ.



ರೈತರಿಗೆ ಮಾವಿನ ತೋಟದ ವಿಸ್ತೀರ್ಣದಂತೆ ಫಸಲನ್ನು ನಿಗದಿ ಮಾಡಿ ಪರಿಹಾರ ನೀಡಬೇಕು. ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಮಾಹಿತಿ ದಾಖಲು ಮಾಡಿಕೊಂಡು ಪರಿಹಾರ ವಿತರಣೆ ವ್ಯವಸ್ಥೆ ಮಾಡಿದರೆ ಮಾತ್ರ ರೈತ ಮಾಡಿರುವ ಖರ್ಚಿನಲ್ಲಿ ಒಂದಷ್ಟು ನಷ್ಟ ಕಡಿಮೆ ಮಾಡಬಹುದು.

। ಏತ್ತೂರಹಳ್ಳಿ ಕೆ.ಸತೀಶ್ ಕುಮಾರ್
ತಾಲೂಕು ಪ್ರಧಾನ ಕಾರ್ಯದರ್ಶಿ, ಭಾರತೀಯ ಕಿಸಾನ್ ಸಂಘ, ಮುಳಬಾಗಿಲು

ಪರಿಹಾರಗಳೇನು?

ರೈತನ ತೋಟಕ್ಕೆ ಗ್ರಾಮ ಪಂಚಾಯಿತಿವಾರು ಅಧಿಕಾರಿಗಳು ಭೇಟಿ ನೀಡಿ ರೈತನ ಖಾತೆಗೆ ಸರ್ಕಾರ ಪರಿಹಾರ ನೀಡಿದರೆ ಒಂದಷ್ಟು ನಷ್ಟ ಕಡಿಮೆ ಮಾಡಬಹುದು. ಅದು ಬಿಟ್ಟು ಮತ್ತಷ್ಟು ಖರ್ಚು ಮಾಡಿಸುವ ಯೋಜನೆಗಳನ್ನು ಕೈಬಿಟ್ಟು ರೈತರ ಹಿತ ಕಾಪಾಡಲು, ಅಧಿಕಾರಿಗಳು, ಜನಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತರಬೇಕಿದೆ.

Cheap imports leave K'taka's tur dal farmers in dire straits

Sanjay.Murty@timesofindia.com

Bengaluru: Farmers growing tur dal in Karnataka's northeastern districts are grappling with falling prices due to a surge in cheap imports, compounding losses already inflicted by poor yields following erratic weather.

Tur, or pigeon pea, is a signature crop in Kalaburagi and holds a geographical indication (GI) tag for its unique quality. The pulse is also widely cultivated in Vijayapura, Bidar, Yadgir and Raichur districts, making Karnataka the second-largest producer in India.



But despite a rise in cultivation area, the state's production slipped from 10.2 lakh tonnes in 2023-24 to 9.9 lakh tonnes in 2024-25, with yield dropping sharply from 747 kg/hectare to 572 kg/hectare. Farmers say the blow has been made worse by a price crash, *with tur dal selling below the minimum support price (MSP) of Rs 7,550 per quintal.*

Amarnath C Patil, former president, Kalyana Karnataka Chamber of Commerce and Industry, blamed the price dip on large-scale imports. "India is importing tur dal from countries like Myanmar and Tanzania," Patil said. "These are cheaper but of substandard quality. People are generally unaware of the quality of pulses they buy."

He said imported stock is acquired at prices around Rs 5,500-6,000 per quintal. "The basis of these imports is unclear," Patil said. "When we have superior quality tur dal being produced by our farmers, importing large quantities and causing prices to crash is impractical."

Patil said now, even local mills prefer imported pulses. "This has reduced demand for locally grown tur by 10-15% and prices by Rs 5 to Rs 7 per kg," he said. India's pulse imports jumped from 24.9 lakh tonnes in 2022-23 to 48.4 lakh tonnes in 2023-24.

Punishing season

For farmers like Shivalingappa Shuragatti from Bhimalli in Kalaburagi, the season has been punishing. "We used to produce an average 3-5 quintals of tur per acre. This time, it fell to 1-2 quintals," he said.

He said growing tur no longer makes economic sense. "Many farmers are left with very little money after they sell their produce for Rs 6,000 per quintal in the open market," Shuragatti said. "It barely covers their cost of production. We can manage if we get around Rs 8,000. Compared to crops like jowar, tur was a crop that used to give us good income."

Samad Patel, Kalaburagi's joint director of agriculture, admitted that better prices are critical. "The cost of production is rising. Farmers need better prices to sustain," he said.

Consumer inflation

Chirag Jain, partner at Grant Thornton Bharat, said the Centre is concerned about consumer inflation. "The govt has prioritised short-term consumer stability," he said. "This is evident in policies like extending duty-free imports for tur until March 31, 2026."

Jain warned that long-term import reliance could hurt farmers. "Countries like Myanmar are highly dependent on India, with 95% of their export destined for Indian markets between 2017-2019. India has even signed long-term MoUs with nations like Mozambique to promote pigeon pea production for import. This tactic risks flooding the market with pulses that may not meet Indian consumer preferences, while simultaneously disincentivising domestic farmers."

India's overall pulse production remains at 766 kg/hectare, way below the global average of 1,015kg. "This is due to cultivation in poor and marginalised areas with low resource conditions, poor seed replacement rates, and limited adoption of improved technologies," Jain said. He recommended a dynamic import management system with flexible tariffs and a minimum import price (MIP) to avoid undercutting local growers.

Times of Ind Pg 04



ಕರಿಬೇವು ಬೆಳೆದು ಕೋಟ್ಯಧೀಶನಾದ!

ಮಾರುಕಟ್ಟೆಯ ಆಳ-ಅಗಲ ಅರಿತು ಕೃಷಿ 15 ವರ್ಷ ಇಳುವರಿ

■ ವಿರೂಪಾಕ್ಷಯ್ಯ ಗುದ್ನಯ್ಯನವರಮಠ ಹುಬ್ಬಳ್ಳಿ

ಕೇವಲ ಕರಿಬೇವು ಕೃಷಿ ಮಾಡಿ ಧಾರವಾಡ ತಾಲೂಕಿನ ವೆಂಕಟಾಪುರ ಗ್ರಾಮದ ರೈತ ದಾದಾಸಾಬ್ ಅಲ್ಲಾಭಕ್ಷ ಮಕಾನದಾರ ಕೋಟ್ಯಧೀಶರಾಗಿದ್ದಾರೆ! ಆಶ್ಚರ್ಯ ಎನಿಸಿದರೂ ಇದು ಸತ್ಯ! ಒಟ್ಟು ಎರಡು ಕಡೆ 10 ಎಕರೆ ಭೂಮಿಯಲ್ಲಿ ಕರಿಬೇವು ಬೆಳೆಯುತ್ತಿರುವ ದಾದಾಸಾಬ್ ಎರಡು ವರ್ಷಗಳ ಹಿಂದೆ ಆಂಧ್ರಪ್ರದೇಶದ ವಿಜಯವಾಡದಿಂದ 60 ಕೆಜಿ ಸುಹಾಸಿನಿ ಹಾಗೂ ಜವಾರಿ ತಳಿಯ ಬೀಜಗಳನ್ನು (ಕೆಜಿಗೆ 500 ರೂ.) ತಂದು 2/2 ಅಂತರದಲ್ಲಿ ಬಿತ್ತನೆ ಮಾಡಿದ್ದಾರೆ. ಆರು ತಿಂಗಳಲ್ಲಿ ಬೆಳೆ ಎರಡು ಅಡಿ ಬೆಳೆಯುತ್ತಿದ್ದಂತೆ ಕಟಾವು ಮಾಡಿದ್ದಾರೆ. ಆ ನಂತರ ಪ್ರತಿ 3 ತಿಂಗಳಿಗೊಮ್ಮೆ ಕಟಾವು ಮಾಡಲಾಗುತ್ತಿದೆ. 10 ಎಕರೆ ಭೂಮಿಯಲ್ಲಿ ವರ್ಷಕ್ಕೆ 20 ಟನ್ ಇಳುವರಿ ತೆಗೆಯುತ್ತಿದ್ದಾರೆ. ಪ್ರತಿದಿನ 3 ಕ್ವಿಂಟಾಲ್ ನಷ್ಟು ಕಟಾವು ಮಾಡಿ ಮಾರುಕಟ್ಟೆಗೆ ಕಳುಹಿಸುತ್ತಿದ್ದಾರೆ. ಬೇರಿಕೆ ಇದ್ದ ಕಡೆಗೆ ದಿನ ಬಿಟ್ಟು ದಿನ ಕಳುಹಿಸಲಾಗುತ್ತದೆ. ಕೆಜಿ 25 ರೂ.ನಿಂದ 50 ರೂ.ಗೆ ಮಾರಾಟವಾಗುತ್ತಿದೆ.

17 ಎಕರೆ ಭೂಮಿ ಖರೀದಿ: ದಾದಾಸಾಬ್ ಕರಿಬೇವು ಬೆಳೆಯಿಂದ ಬಂದ ಹಣದಿಂದ ದುಬ್ಬನಮರಡಿಯಲ್ಲಿ 2010ರಲ್ಲಿ 4 ಎಕರೆ, 2017ರಲ್ಲಿ 5 ಎಕರೆ, 2021ರಲ್ಲಿ 3 ಹಾಗೂ 2025ರಲ್ಲಿ 5 ಎಕರೆ ಸೇರಿ ಒಟ್ಟು 17 ಎಕರೆ ಭೂಮಿ ಖರೀದಿಸಿದ್ದಾರೆ. ಭೂಮಿ ಖರೀದಿಸಿದ ನಂತರ ಮೂರು ಕೊಳವೆಬಾವಿ ಕೊರೆಸಿದ್ದಾರೆ. ಹನಿ ನೀರಾವರಿ ಮೂಲಕ ಬೆಳೆ ಬೆಳೆಯಲಾಗುತ್ತಿದೆ. ತೋಟಗಾರಿಕೆ ಇಲಾಖೆಯಿಂದ 5 ಎಕರೆ ಜಮೀನಿನಲ್ಲಿ ಕರಿಬೇವು ಬೆಳೆಯಲು ಹನಿ ನೀರಾವರಿಗಾಗಿ 2.28 ಲಕ್ಷ ರೂ. ಸಹಾಯಧನ ಪಡೆದಿದ್ದಾರೆ.

14 ಲಕ್ಷ ರೂ. ಆದಾಯ: ಕಳೆದ ವರ್ಷ 5 ಎಕರೆಯಲ್ಲಿ ಕರಿಬೇವು ಬೆಳೆದು 14 ಲಕ್ಷ ರೂ. ಲಾಭ ಗಳಿಸಿದ್ದರು. ಮತ್ತೆ 5 ಎಕರೆಯಲ್ಲಿ ಕಳೆದ ವರ್ಷ ಜೂನ್‌ನಲ್ಲಿ ಹೊಸದಾಗಿ ಬೀಜ ಬಿತ್ತನೆ ಮಾಡಲಾಗಿದೆ. ಆ ಜಮೀನಿನಲ್ಲೂ ಈವರೆಗೆ 3 ಬಾರಿ ಕಟಾವು ಮಾಡಲಾಗಿದೆ. ಇನ್ನುಳಿದ 7 ಎಕರೆಯಲ್ಲಿ 2 ಎಕರೆ ನೋಯಾಬೀನ್, 2 ಎಕರೆ ಕಬ್ಬು, 3 ಎಕರೆಯಲ್ಲಿ ಗೋವಿನ ಜೋಳ ಬೆಳೆಯುತ್ತಿದ್ದಾರೆ.

ಚಿಕ್ಕಂದಿನಲ್ಲೇ ಕರಿಬೇವು ವ್ಯಾಪಾರ: 45 ವರ್ಷದ ದಾದಾಸಾಬ್ 17ನೇ ವಯಸ್ಸಿನಿಂದಲೇ ಕರಿಬೇವನ್ನು ಚಿಲ್ಲರೆಯಾಗಿ ಮಾರಾಟ ಮಾಡುತ್ತಿದ್ದರು. ಬಳಿಕ ಕರಿಬೇವು ತೋಟ, ಗಿಡಗಳನ್ನು ಗುತ್ತಿಗೆ ಪಡೆದು ಕಟಾವು ಮಾಡಿ ಧಾರವಾಡ ಮತ್ತು ಬೆಳಗಾವಿ ಎಪಿಎಂಸಿಯಲ್ಲಿ ಮಾರಾಟ ಮಾಡುತ್ತಿದ್ದರು. ಕರಿಬೇವು ಬೆಳೆಯುವ ಬಗೆ, ಕಟಾವು, ಮಾರಾಟ, ಮಾರುಕಟ್ಟೆ ಹೀಗೆ ಎಲ್ಲ ವಿಷಯ ಅರಿತುಕೊಂಡು ಇದೀಗ ಕೃಷಿಗೆ ಇಳಿದಿದ್ದಾರೆ.



ಕರಿಬೇವು ವ್ಯಾಪಾರ ಮಾಡುತ್ತಿದ್ದಾಗ ಮಾರುಕಟ್ಟೆ ವ್ಯವಸ್ಥೆ ತಿಳಿದುಕೊಂಡೆ. ಬಳಿಕ ಹಂತ ಹಂತವಾಗಿ ಮಾರಾಟದ ಮೂಲಕವೇ 15 ವರ್ಷಗಳಲ್ಲಿ 17 ಎಕರೆ ಭೂಮಿ ಖರೀದಿಸಿದ್ದೇನೆ. ಜಮೀನಿನಲ್ಲಿ ಕಷ್ಟಪಟ್ಟು ದುಡಿದರೆ ಭೂಮಿತಾಯಿ ಕೈ ಹಿಡಿಯುತ್ತಾಳೆ ಎಂಬುದಕ್ಕೆ ನಾನೇ ಸಾಕ್ಷಿ.

| ದಾದಾಸಾಬ್ ಮಕಾನದಾರ್
ಕರಿಬೇವು ಬೆಳೆಗಾರ

ರೈತರು ಕರಿಬೇವು, ಪೇರಲ, ಸೀತಾಫಲ, ಚಿಕ್ಕು, ಮಾವು, ತಾಳೆ, ಮತ್ತಿತರ ಬೆಳೆ ಬೆಳೆಯಲು ತೋಟಗಾರಿಕೆ ಇಲಾಖೆ ಮತ್ತು ನರೇಗಾ ಯೋಜನೆಯಡಿ ಸಹಾಯಧನ ಸಿಗುತ್ತದೆ. ಆರ್ಹ ರೈತರು ಯೋಜನೆಗಳ ಸದುಪಯೋಗ ಪಡೆದು ಆರ್ಥಿಕವಾಗಿ ಸಬಲರಾಗಬೇಕು.

| ಕಾತಿನಾಥ ಭದ್ರಣ್ಣವರ
ಉಪನಿರ್ದೇಶಕ, ತೋಟಗಾರಿಕೆ ಇಲಾಖೆ, ಧಾರವಾಡ

ಬೆಳೆಗೂ ಮೊದಲು ಮಾರುಕಟ್ಟೆ ಸ್ಥಿತಿಗತಿ ಅರಿತುಕೊಳ್ಳಬೇಕು. ಯಾವ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಲಾಭ ಹೆಚ್ಚು ಎಂಬುದನ್ನು ತಿಳಿದುಕೊಳ್ಳಬೇಕು. ಇದರಿಂದ ಫಸಲು ಕೈಗೆ ಬರುವ ಸಮಯಕ್ಕೆ ಒಳ್ಳೆಯ ಲಾಭ ಮಾಡಿಕೊಳ್ಳಬಹುದು.

| ಇಮ್ತಿಯಾಜ್ ಚೆಂಗಾಪುರಿ ಹಿರಿಯ ಸಹಾಯಕ ನಿರ್ದೇಶಕ, ತೋಟಗಾರಿಕೆ ಇಲಾಖೆ, ಧಾರವಾಡ



Vijayavani Pg 08



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

MOFPI MINISTRY OF FOOD PROCESSING INDUSTRIES GOVERNMENT OF INDIA

KAPPEC





ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯಡಿ

ಕಿರು ಆಹಾರ ಸಂಸ್ಕರಣೆ ಉದ್ದಿಮೆಗಳ ಸ್ಥಾಪನೆ / ಅಭಿವೃದ್ಧಿಗೆ ಸುವರ್ಣಾವಕಾಶ. ಒಟ್ಟಾರೆಯಾಗಿ ಈ ಯೋಜನೆಯಡಿಯಲ್ಲಿ ಶೇ.50 ರಷ್ಟು ಅಥವಾ ಗರಿಷ್ಠ ರೂ.15.00 ಲಕ್ಷ ಸಹಾಯಧನ (ಕೇಂದ್ರ ಸರ್ಕಾರದ ರೂ.6.00 ಲಕ್ಷ ಹಾಗೂ ರಾಜ್ಯ ಸರ್ಕಾರದ ರೂ.9.00 ಲಕ್ಷ ಸಹಾಯಧನ ನೀಡಿಕೆ.)

ಯೋಜನೆಯ ಘಟಕಗಳು

- **ವೈಯಕ್ತಿಕ ಕಿರು ಉದ್ದಿಮೆಗಳಿಗೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳು (FPOs)/ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ:** ಪ್ರತಿ ಘಟಕಕ್ಕೆ ರೂ.10.00 ಲಕ್ಷದ ಗರಿಷ್ಠ ಮಿತಿಯೊಂದಿಗೆ ಆರ್ಹ ಯೋಜನಾ ವೆಚ್ಚದ ಶೇ.35ರಷ್ಟು (ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುಪಾತ 60:40) ಮೌಲ್ಯದ ಸಾಲ-ಸಂಪರ್ಕವಿರುವ ಸಹಾಯಧನ. ರಾಜ್ಯ ಸರ್ಕಾರದ ವತಿಯಿಂದ ಶೇ.15 ರಷ್ಟು ಹಾಗೂ ಗರಿಷ್ಠ ರೂ.5.00 ಲಕ್ಷ ಹೆಚ್ಚುವರಿ ಸಹಾಯಧನ. ಒಟ್ಟಾರೆ ಶೇ.50 ರಷ್ಟು ಅಥವಾ ಗರಿಷ್ಠ ರೂ.15.00 ಲಕ್ಷ ಸಹಾಯಧನ.
- **ಸ್ವಸಹಾಯ ಸಂಘಗಳ ಸದಸ್ಯರಿಗೆ:** ಎಸ್‌ಹೆಚ್‌ಜಿಯ ಪ್ರತಿ ಸದಸ್ಯರಿಗೆ ಕಾರ್ಯನಿರ್ವಹಣಾ ಬಂಡವಾಳ ಹಾಗೂ ಚಿಕ್ಕ ಪರಿಕರಗಳನ್ನು ಖರೀದಿಸಲು ರೂ.40,000/-ಪ್ರಾಥಮಿಕ ಬಂಡವಾಳ ನೀಡಿಕೆ
- **ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ:** ಆರ್ಹ ಯೋಜನಾ ವೆಚ್ಚದ ಶೇ 35ರಷ್ಟು ಮೌಲ್ಯದ ಸಾಲ-ಸಂಪರ್ಕವಿರುವ ಸಹಾಯಧನ.
- **ಬ್ರಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ:** ಆರ್ಹ ಯೋಜನಾ ವೆಚ್ಚದ ಶೇ 50ರಷ್ಟು ಸಹಾಯಧನ



ಶ್ರೀ ಎಸ್. ಚಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು ಕೆವೆಕ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ಹರೀಶ ಅವರೊಂದಿಗೆ ಸಮಾರಂಭವೊಂದರಲ್ಲಿ ಭಾಗವಹಿಸಿರುವುದು.

ಯೋಜನೆಯ ಬಗ್ಗೆ ಜಿಲ್ಲಾವಾರು ಅರಿವು ಮೂಡಿಸುವ ಕಾರ್ಯಕ್ರಮ: ಜಿಲ್ಲಾ ಉಸ್ತುವಾರಿ ಸಚಿವರ ಮುಂದಾಳತ್ವದಲ್ಲಿ


ಕ್ರ. ಸಂ.	ಜಿಲ್ಲೆ	ದಿನಾಂಕ
1	ಬೆಳಗಾವಿ	08.07.2025
2	ಧಾರವಾಡ	09.07.2025
3	ಹಾವೇರಿ	10.07.2025
4	ಬೀದರ್	16.07.2025
5	ಕಲಬುರಗಿ	17.07.2025
6	ಮಂಡ್ಯ	23.07.2025
7	ರಾಮನಗರ	24.07.2025
8	ತುಮಕೂರು	25.07.2025
9	ರಾಯಚೂರು	30.07.2025
10	ಯಾದಗಿರಿ	31.07.2025
11	ದಾವಣಗೆರೆ	05.08.2025
12	ಚಿತ್ರದುರ್ಗ	06.08.2025
13	ಬಳ್ಳಾರಿ	12.08.2025
14	ವಿಜಯನಗರ	13.08.2025
15	ಚಾಮರಾಜನಗರ	20.08.2025
16	ಮೈಸೂರು	21.08.2025
17	ಕೊಡಗು	22.08.2025
18	ವಿಜಯಪುರ	29.08.2025
19	ಬಾಗಲಕೋಟೆ	30.08.2025
20	ಉಡುಪಿ	02.09.2025
21	ದಕ್ಷಿಣಕನ್ನಡ	03.09.2025
22	ಹಾಸನ	09.09.2025
23	ಚಿಕ್ಕಮಗಳೂರು	10.09.2025
24	ಶಿವಮೊಗ್ಗ	11.09.2025
25	ಉತ್ತರಕನ್ನಡ	16.09.2025
26	ಗದಗ	17.09.2025
27	ಕೊಪ್ಪಳ	18.09.2025
28	ಬೆಂಗಳೂರುಗ್ರಾಮಾಂತರ	23.09.2025
29	ಚಿಕ್ಕಬಳ್ಳಾಪುರ	24.09.2025
30	ಕೋಲಾರ	25.09.2025

ಸ್ಥಳ :ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಸಭಾಂಗಣ

ಕಾರ್ಯಕ್ರಮದ ವಿವರಗಳು

- PMFME ಯೋಜನೆಯ ಬಗ್ಗೆ ಸಮಗ್ರ ಮಾಹಿತಿ-ಪ್ರಶ್ನೋತ್ತರಗಳು
- ಬ್ಯಾಂಕ್‌ನಲ್ಲಿ ಸಾಲ ಸೌಲಭ್ಯದ ಅವಕಾಶಗಳು ಮತ್ತು ಸಾಲಪಡೆಯಲು ಅವಶ್ಯಕ ವಿರುವ ಆರ್ಹತೆಗಳು / ದಾಖಲೆಗಳು
- ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು (District Resource Person) ಹಾಗೂ ಯಶಸ್ವಿ ಫಲಾನುಭವಿಗಳಿಂದ ಅನುಭವ ಹಂಚಿಕೆ
- ಸ್ಥಳದಲ್ಲಿಯೇ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ

ಹೊಸದಾಗಿ ಆಹಾರ ಸಂಸ್ಕರಣಾ ಉದ್ದಿಮೆ ಸ್ಥಾಪಿಸಲು ಹಾಗೂ ಹಾಲಿ ಇರುವ ಆಹಾರ ಸಂಸ್ಕರಣಾ ಉದ್ದಿಮೆ ವಿಸ್ತರಿಸಲು ಆಸಕ್ತಿ ಹೊಂದಿರುವವರಿಗೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸ್ವಾಗತ



ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ಸಲ್ಲಿಕೆಗಾಗಿ ತಮ್ಮ ಜಿಲ್ಲೆಯ ಜಂಂಟ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ಅಥವಾ ಕೆವೆಕ್ ಸಂಸ್ಥೆಯ ಯೋಜನಾ ನಿರ್ವಹಣಾ ಘಟಕವನ್ನು ಸಂಪರ್ಕಿಸಿ.

ವೆಬ್‌ಸೈಟ್ ವಿಳಾಸ: https://pmfme.mofpi.gov.in
https://kappec.karnataka.gov.in
Mobile : 080-22271192 / 93 / 9741008486 / 9964109759 / 9731201215

ಪ್ರಕಟಣೆ: ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ) ಹಾಗೂ ರಾಜ್ಯ ನೋಡಲ್ ಏಜೆನ್ಸಿ – PMFME
ನಂ.17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್ಮಂಡ್ ರಸ್ತೆ), ಬೆಂಗಳೂರು-560025 ಇ-ಮೇಲ್: pmfmekarnataka@gmail.com

V-karnataka Pg 04